# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 108 (74) |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-12-2022 |
| ಉತ್ತರಿಸುವ ಸಚಿವರು | : | ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರಂಗಮಂದಿರಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಇದನ್ನು ಸರಿದೂಗಿಸಲು ಸರ್ಕಾರ ಈಗಾಗಲೇ ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿಯೆ ಬೆಂಗಳೂರು ನಗರದ ನಾಲ್ಕು ಕಡೆ ರಂಗಮಂದಿರವನ್ನು ನಿರ್ಮಿಸಿರುವುದಾಗಿ ಘೋಷಿಸಿ ಎರಡು ವರ್ಷಗಳಾಗಿರುವುದು ನಿಜವೇ; ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳನ್ನು ಗುರುತಿಸಲಾಗಿದೆ; (ಸ್ಥಳದ ವಿವರವನ್ನು ಒದಗಿಸುವುದು) | • ಹೌದು.<br><br>• ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕು, ಜಾಲ ಹೋಬಳಿ, ನವರತ್ನ ಅಗ್ರಹಾರ ಗ್ರಾಮದ ಸರ್ವೆ ನಂ.94ರ ಸರ್ಕಾರಿ ಗೋಮಾಳ ಜಮೀನಿನಲ್ಲಿ 1.00 ಎಕರೆಯನ್ನು ರಂಗಮಂದಿರಕ್ಕೆ ಸ್ಥಳ ಗುರುತಿಸಲಾಗಿದೆ.<br><br>• ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಗುಟ್ಟಹಳ್ಳಿ ಗ್ರಾಮದ ಸರ್ವೆ ನಂ.02ರಲ್ಲಿ 0-18 ಗುಂಟೆ ಮತ್ತು ಸರ್ವೆ ನಂ.03ರಲ್ಲಿ 1 ಎಕರೆ 02 ಗುಂಟೆ ಒಟ್ಟು 1 ಎಕರೆ 20 ಗುಂಟೆ ಜಮೀನನ್ನು ಕಲಾಕ್ಷೇತ್ರ ನಿರ್ಮಿಸುವ ಸಲುವಾಗಿ ಸ್ಥಳ ಗುರುತಿಸಲಾಗಿದೆ.<br><br>• ಸೂರ್ಯನಗರ ವಸತಿ ಬಡಾವಣೆಯ ಸೆಕ್ಟರ್ "ಎ" ಸಿ.ಎ. ನಿವೇಶನ ಸಂಖ್ಯೆ – 1941, 1942 ಮತ್ತು 1910 ಈ ಮೂರು ನಿವೇಶನದ 4 ಎಕರೆ ಜಾಗ ಅಥವಾ ಬೆಂಗಳೂರು ಮತ್ತು ಹೊಸಕೋಟೆ ಮುಖ್ಯ ರಸ್ತೆಯ ರಾಷ್ಟ್ರೀಯ ಹೆದ್ದಾರಿ-4 (ವಾಣಿಜ್ಯ ನಿವೇಶನ-1) ಸಂಯುಕ್ತ ವಸತಿ ಯೋಜನೆ, ಹುಸ್ಕೂರು ಗ್ರಾಮ, ಬಿದರಹಳ್ಳಿ ಹೋಬಳಿಯಲ್ಲಿ ಗುರುತಿಸಲಾಗಿದೆ.<br><br>• ಸದರಿ ನಿವೇಶನಗಳನ್ನು ಇಲಾಖೆಗೆ ಹಸ್ತಾಂತರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಇ) | ಸರ್ಕಾರ ರಂಗಮಂದಿರಗಳನ್ನು ನಿರ್ಮಿಸಲು ನಿಗದಿ ಪಡಿಸಿರುವ ಅನುದಾನವೆಷ್ಟು; ಈ ಅನುದಾನವನ್ನು ಯಾವ ಇಲಾಖೆ ಬಿಡುಗಡೆಗೊಳಿಸಲಾಗಿದೆ; ರಂಗಮಂದಿರ ನಿರ್ಮಾಣ ಮಾಡಲು ನಿರ್ದಿಷ್ಟ ಸಮಯ ಮತ್ತು ನಕ್ಷೆಯನ್ನು ಸಿದ್ಧಪಡಿಸಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು; | • ಸರ್ಕಾರದ ಮಾರ್ಗಸೂಚಿ ಸಂಖ್ಯೆ: ಕಸಂವಾ/167/ಕಸಧ/2022, ದಿನಾಂಕ: 22.06.2022ರಲ್ಲಿ ತಾಲ್ಲೂಕಿನಲ್ಲಿ ರಂಗಮಂದಿರಗಳನ್ನು ನಿರ್ಮಿಸಲು ರೂ.100.00 ಲಕ್ಷ ಹಾಗೂ ಜಿಲ್ಲಾ ರಂಗಮಂದಿರಗಳನ್ನು ನಿರ್ಮಿಸಲು ರೂ.300.00 ಲಕ್ಷ ಅನುದಾನವನ್ನು ನಿಗಧಿಪಡಿಸಲಾಗಿದೆ.<br><br>• ಜಿಲ್ಲಾ ರಂಗಮಂದಿರಗಳನ್ನು ನಿರ್ಮಿಸಲು ರಂಗಮಂದಿರದ ಮಾದರಿ ನಕ್ಷೆ ಹಾಗೂ ಅಂದಾಜುಪಟ್ಟಿ ಸಿದ್ಧಪಡಿಸಿಕೊಡುವಂತೆ ಕೋರಿ ಲೋಕೋಪಯೋಗಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದೆ. |

.....2

| | | |
|---|---|---|
| ಈ) | ಕಲೆಗಳನ್ನು ಹಾಗೂ ರಂಗಭೂಮಿಯ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ರಂಗಭೂಮಿಯ ಕೊರತೆ ಹಾಗೂ ಸಮಸ್ಯೆಗಳನ್ನು ನೀಗಿಸಲು ಕರ್ನಾಟಕ ನಾಟಕ ಅಕಾಡೆಮಿಯು ಈ ಹಿಂದೆ ಪ್ರತಿ ತಾಲ್ಲೂಕಿನಲ್ಲಿ 300 ಆಸನದ ಸುಸಜ್ಜಿತ ರಂಗಮಂದಿರವನ್ನು ನಿರ್ಮಾಣ ಮಾಡಲು ಸಲ್ಲಿಸಿದ್ದ ಪ್ರಸ್ತಾವನೆಗಳು ಇನ್ನೂ ನನೆಗುದಿಗೆ ಬಿದ್ದಿದ್ದು, ಈ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಸರ್ಕಾರದ ನಿಲುವೇನು? | ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ ಇವರು ಪ್ರತಿ ತಾಲ್ಲೂಕಿನಲ್ಲಿ 300 ಆಸನದ ಸುಸಜ್ಜಿತ ರಂಗಮಂದಿರವನ್ನು ನಿರ್ಮಾಣ ಮಾಡಲು ಕೋರಿರುವ ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿರುತ್ತದೆ. |

ಸಂಖ್ಯೆ: ಕಸಂವಾ 86 ಕವಿಸ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.